

# ತುಂಗಾತೀರದ ಹುಡುಗಿಯ ಬಣ್ಣಬಣ್ಣದ ಲೋಕ

**ನೃತ್ಯ, ರಂಗಭೂಮಿ, ಕಿರುತೆರೆಯ ಸಖ್ಯದೊಂದಿಗೆ ಸಿನಿಮಾಲೋಕ ಪ್ರವೇಶಿಸಿರುವ ಮಲೆನಾಡಿನ ಹುಡುಗಿ ನಾಗಶ್ರೀ ಬೇಗಾರ್ ಅವರಿಗೆ ತಮ್ಮನ್ನು ಕ್ರಿಯಾಶೀಲ ಪಾತ್ರಗಳಲ್ಲಿ ಪ್ರಯೋಗಿಸಿಕೊಳ್ಳುವ ಅಪೇಕ್ಷೆ.**

**■ ಸುಮಲತಾ ಎನ್.**

ಮಲೆನಾಡಿನ ಮಡಿಲಲ್ಲಿ ಹುಟ್ಟಿ ಬೆಳೆದ ಹುಡುಗಿ ನಾಗಶ್ರೀ ಬೇಗಾರ್ ಅವರದ್ದು ಕಲಾ ಕುಟುಂಬ. ತಾತ, ಅಪ್ಪನಿಂದ ಬಳುವಳಿಯಾಗಿ ಬಂದ ಕಲೆಯನ್ನು ತಮ್ಮ ಬದುಕಿನ ಹಾದಿಗೆ ಬೆಸೆದು ಚಂದನವನದಲ್ಲಿ ತಮ್ಮ ಕನಸುಗಳನ್ನು ಅರಸುತ್ತಿದ್ದಾರೆ.

ತಾತನಿಂದ ಬಂದ ಸಂಗೀತ, ಅಪ್ಪನೊಂದಿಗೆ ಬೆಸೆದುಕೊಂಡ ರಂಗಭೂಮಿಯ ನಂಟು, ಹಾಗೆಯೇ ತಮಗೆ ಎಳೆ ವಯಸ್ಸಿನಲ್ಲೇ ಜೊತೆಯಾದ ಭರತನಾಟ್ಯವನ್ನು ಮೈಗೂಡಿಸಿಕೊಂಡು ನಟನೆಯ ಹೊಸ ಪ್ರಯೋಗಕ್ಕೆ ತೆರೆದುಕೊಳ್ಳುತ್ತಿದ್ದಾರೆ.

ಅಂದಹಾಗೆ ನಾಗಶ್ರೀ ಅವರ ಹುಟ್ಟೂರು ಶೃಂಗೇರಿ. ಪಿಯುಸಿವರೆಗೂ ಅಲ್ಲೇ ವಿದ್ಯಾಭ್ಯಾಸ ಮಾಡಿದ ಅವರು ನಂತರ ತಮ್ಮ ಪ್ರತಿಭೆಗೆ ತಕ್ಕ ವೇದಿಕೆ ಅರಸಿ ಬಂದದ್ದು ಬೆಂಗಳೂರಿಗೆ. ಬೆಂಗಳೂರಿನ ಕಾಲೇಜಿನಲ್ಲಿ ಪ್ರದರ್ಶನ ಕಲೆಯ ವ್ಯಾಸಂಗ ಮಾಡುತ್ತಲೇ ಪುಟ್ಟ ರಂಗತಂಡ ಕಟ್ಟಿ ನಾಟಕ ಪ್ರದರ್ಶಿಸಿದ್ದು ಅವರ ಆತ್ಮವಿಶ್ವಾಸದ ದಾರಿಯನ್ನು ಹಿಗ್ಗಿಸಿತ್ತು.

‘ನಮ್ಮದು ಕಲಾ ಕುಟುಂಬ. ಅಜ್ಜ ಸಂಗೀತ ಶಿಕ್ಷಕರಾಗಿದ್ದರು. ಅಪ್ಪ ರಮೇಶ್ ಬೇಗಾರ್ ರಂಗಭೂಮಿ ಕಲಾವಿದರು, ನಿರ್ದೇಶಕರು. ಕಲೆಯನ್ನೇ ಜೀವಿಸುತ್ತಿದ್ದ ವಾತಾವರಣದಲ್ಲಿ ಬೆಳೆದ ನನಗೆ ನಟನೆ ಆಕಸ್ಮಿಕವೇನಲ್ಲ. ಚಿಕ್ಕ ವಯಸ್ಸಿನಿಂದ ಭರತನಾಟ್ಯ ಕಲಿತಿದ್ದೆ. ಯಕ್ಷಗಾನ ಕಲೆಯಲ್ಲೂ ಆಸಕ್ತಿ ಬೆಳೆಸಿಕೊಂಡಿದ್ದೆ. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನೂ ಕಲಿತಿದ್ದರಿಂದ ಶಾಲಾ ಕಾಲೇಜುಗಳಲ್ಲಿ ನನ್ನನ್ನು ಕಲಾವಿದೆ ಎಂದೇ ಗುರುತಿಸುತ್ತಿದ್ದರು. ಅದೇ ನನ್ನ ಐಡೆಂಟಿಟಿ ಆಗಿತ್ತು. ಆನಂತರ ರಂಗಭೂಮಿ ನನಗೆ ಹೊಸ ಹಾದಿ ತೆರೆದುಕೊಟ್ಟಿತು. ನಟನೆಯೆಡೆಗೆ ಗಂಭೀರವಾಗಿ ಆಲೋಚಿಸುವಂತೆ ಮಾಡಿತು’ ಎಂದು ತಮ್ಮ ಹಿನ್ನೆಲೆಯನ್ನು ವಿವರಿಸುತ್ತಾರೆ ನಾಗಶ್ರೀ.

ಐದನೇ ತರಗತಿಯಲ್ಲಿದ್ದಾಗ ಅಪ್ಪನ ಹವ್ಯಾಸಿ ರಂಗತಂಡದ ‘ಸತ್ಯಹರಿಶ್ಚಂದ್ರ’ ನಾಟಕದಲ್ಲಿ ಹರಿಶ್ಚಂದ್ರನ ಮಗನ ಪಾತ್ರಕ್ಕೆ ಮೊದಲ ಬಾರಿ ಬಣ್ಣ ಹಚ್ಚಿದರು ನಾಗಶ್ರೀ. ಕಾಲೇಜು ಓದುವಾಗ ‘ಬಣ್ಣದ ಮನೆ’ ರಂಗತಂಡ ಕಟ್ಟಿ ನಾಟಕಗಳನ್ನು ಪ್ರದರ್ಶಿಸಿದರು. ಅಲ್ಲಿ ಅವರಿಗೆ ಸಿಕ್ಕ ಶಹಭಾಷ್‌ಗಿರಿ, ನಟನೆಯ ಬಗ್ಗೆ ಅಭಿಲಾಷೆಯನ್ನು ಹುಟ್ಟುಹಾಕಿತ್ತು.

ನಂತರ ಕೊರೊನಾ ಲಾಕ್‌ಡೌನ್ ಸಮಯದಲ್ಲಿ ತಮ್ಮ ತಂದೆಯವರ ‘ಹುಚ್ಚಿಕ್ಕಿ’ ಎಂಬ ಕಿರುಚಿತ್ರದಲ್ಲಿ ಮೊದಲ ಬಾರಿ ಕ್ಯಾಮೆರಾ ಎದುರಿಸಿದರು. ಮತ್ತೊಂದು ಕಿರುಚಿತ್ರ ‘ಶುದ್ಧ ಸಾವೇರಿ’ಯಲ್ಲಿಯೂ ನಟಿಸಿದರು. ಈ ನಡುವೆ ಕಿರುತೆರೆಯಲ್ಲೂ ಅವಕಾಶ ಹುಡುಕಿ ಬಂತು. ನಿರ್ದೇಶಕ ಟಿ.ಎನ್. ಸೀತಾರಾಮ್ ಅವರ ‘ಮತ್ತೆ ಮಾಯಾಮೃಗ’ ಧಾರಾವಾಹಿಯಲ್ಲಿ ನಟಿಸಿದರು. ಕಿರುತೆರೆ ಮತ್ತಷ್ಟು ಹೊಸ ಅನುಭವಗಳನ್ನು ಅವರಿಗೆ ತಂದುಕೊಟ್ಟಿತು.

ಬೆಳ್ಳಿತೆರೆಗೆ ‘ವೈಶಂಪಾಯನ ತೀರ’ದ ಮೂಲಕ ಪ್ರವೇಶ ಪಡೆದ ಅವರು, ನಂತರ ‘ಜಲಪಾತ’ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ತೊಡಗಿಕೊಂಡರು. ಸದ್ಯ ಅವರ ನಟನೆಯ ‘ಊರಿನ ಗ್ರಾಮಸ್ಥರಲ್ಲಿ ವಿನಂತಿ’ ಸಿನಿಮಾ ಚಿತ್ರೀಕರಣ ಮುಗಿಸಿದೆ. ಮತ್ತೊಂದು ಧಾರಾವಾಹಿಯ ಮಾತುಕತೆ ನಡೆಯುತ್ತಿದೆ.

ಸಿನಿಮಾರಂಗದ ಕ್ರಿಯಾಶೀಲತೆಯ ಕವಲುಗಳಾಗಿರುವ ನೃತ್ಯ, ಕೊರಿಯೊಗ್ರಫಿ, ಸಂಕಲನ, ನಿರ್ದೇಶನದತ್ತಲೂ ಆಸಕ್ತಿ ಬೆಳೆಸಿಕೊಂಡಿದ್ದಾರೆ ನಾಗಶ್ರೀ. ಜೊತೆಗೆ ತಮ್ಮನ್ನು ಕ್ರಿಯಾಶೀಲವಾಗಿಸುವ ಯಾವುದೇ ಪಾತ್ರದಲ್ಲಿಯೂ ತೊಡಗಿಕೊಳ್ಳಬೇಕೆಂಬ ರಂಗಭೂಮಿಯ ಪಾಠವನ್ನು ತಪ್ಪದೇ ಪಾಲಿಸುವುದಾಗಿ ಹೇಳುತ್ತಾರೆ. ■